**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ.708/2020</u>**

**ಫಿರ್ಯಾದುದಾರರುಃ** ಸರ್ಕಾರ ಪರವಾಗಿಃ ಅಬಕಾರಿ ಉಪ ನಿರೀಕ್ಷಕರು,
ಚಿಂತಾಮಣಿ.

ವಿರುದ್ಧ

**ಆರೋಪಿತರುಃ** ಮುನಿರೆಡ್ಡಿ ಬಿನ್ ಚಿಕ್ಕನಾರಾಯಣಸ್ವಾಮಿ,
ವಯಸ್ಸುಃ ವಯಸ್ಕರು
ವಾಸಃ ವಡ್ಡಹಳ್ಳಿ ಗ್ರಾಮ, ಬೊಮ್ಮೆಕಲ್ಲು ಅಂಚೆ,
ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ.

**<u>ದೋಷಾರೋಪಣೆ</u>**

**ಶ್ರೀಮತಿ ಹರ್ಷಿತ, ಬಿ.ಎ., ಎಲ್‌ಎಲ್.ಬಿ, ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.**, ಆದ ನಾನು ಈ ಮೂಲಕ ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಕ್ಕೆ ಗುರಿಪಡಿಸುತ್ತೇನೆ.

ದಿನಾಂಕ 26-03-2020 ರಂದು ರಾತ್ರಿ ಸುಮಾರು 09.05 ರ ಸಮಯದಲ್ಲಿ ಚಿಂತಾಮಣಿ ನಗರದ ವ್ಯಾಪ್ತಿ ಪ್ರದೇಶದಲ್ಲಿ ನೋವಲ್ ಕರೋನಾ ವೈರಸ್ ಕೋವಿಡ್-19 ಹರಡುವಿಕೆಯನ್ನು ತಡೆಗಟ್ಟಲು ಮುಂಜಾಗೃತ ಕ್ರಮವಾಗಿ ಅಬಕಾರಿ ಜಾರಿ ಮತ್ತು ತನಿಖಾ ಕಾರ್ಯಗಳನ್ನು ನಿರ್ವಹಿಸುವ ಸಂಬಂಧವಾಗಿ ಇಲಾಖಾ ವಾಹನದ ನೋಂದಣಿ ಸಂಖೆ ಕೆಎ-40-ಜಿ-546 ರ ವಾಹನದಲ್ಲಿ ಗಸ್ತು ಕಾರ್ಯ ನಿರ್ವಹಿಸುತ್ತಿದ್ದಾಗ, ಚಿಂತಾಮಣಿ ನಗರದ ಕನ್ನಂಪಲ್ಲಿ ಬೆಂಗಳೂರು ರಸ್ತೆಯ ಹಾಲಿನ ಡೈರಿ ಮುಂಭಾಗ ನೀಲಗಿರಿ ತೋಪಿನ ಕಾಲುದಾರಿಯ ಬಳಿ ಆರೋಪಿಯಾದ ನೀವು, ಕೆಎ-07-ಡಬ್ಲ್ಯೂ-9436 ಆಕ್ಟಿವಾ ಹೋಂಡಾ ದ್ವಿಚಕ್ರ

ವಾಹನದಲ್ಲಿ ಪ್ಲಾಸ್ಟಿಕ್  ಚೀಲದಲ್ಲಿ **90** ಎಮ್ ಎಲ್ ನ **96** ಹೈವಾರ್ಡ್ಸ್ ಚೀಯರ್ಸ್ ವಿಸ್ಕಿ ಟೆಟ್ರಾ ಪ್ಯಾಕೆಟ್ ಗಳನ್ನು ಯಾವುದೇ ಪಾಸ್ ಮತ್ತು ಪರ್ಮಿಟ್ ಇಲ್ಲದೆ ಮಾರಾಟ ಮಾಡುವ ಉದ್ದೇಶದಿಂದ ವಾಹನದಲ್ಲಿ ದಾಸ್ತಾನು ಹೊಂದಿ ಸಾಗಾಣಿಕೆ ಮಾಡುತ್ತಿರುತ್ತೀರಿ,  ಆದ್ದರಿಂದ ನೀವು **ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ಸಹವಾಚಕ ಕಲಂ** 11, 14, 15, 43 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

(ಆರೋಪಿಯ ವಿಚಾರಣೆಯನ್ನು ನನ್ನ ಹಾಜರಾತಿಯಲ್ಲಿ ತೆಗೆದುಕೊಂಡು ಆಪಾದನೆಗಳನ್ನು ಅವರಿಗೆ ವಿವರವಾಗಿ ಓದಿ ಹೇಳಿದ ಮೇಲೆ ಅದನ್ನು ನನ್ನ ವೈಯಕ್ತಿಕ ಸುನಾವಣೆಯಲ್ಲಿ ದಾಖಲಿಸಿದ್ದು ಆಪಾದನೆಗಳು ಪೂರ್ಣಶಃ ಸರಿಯಾದ ಹೇಳಿಕೆಯಾಗಿವೆ.)

ದಿನಾಂಕಃ 06-08-2025.

ಸಹಿ/-

(ಶ್ರೀಮತಿ ಹರ್ಷಿತ)

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಚಿಂತಾಮಣಿ.**

**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ.708/2020</u>**

ಫಿರ್ಯಾದುದಾರರುಃ ಸರ್ಕಾರ ಪರವಾಗಿಃ ಅಬಕಾರಿ ಉಪ ನಿರೀಕ್ಷಕರು,
ಚಿಂತಾಮಣಿ.

ವಿರುದ್ಧ

ಆರೋಪಿತರುಃ 1. ಮುನಿರೆಡ್ಡಿ ಬಿನ್ ಚಿಕ್ಕನಾರಾಯಣಸ್ವಾಮಿ,

**<u>ಆರೋಪಣೆ</u>**

ಪ್ರಶ್ನೆಃ 1. ಇದೀಗ ಓದಿ ಹೇಳಿದ ವಿಷಯ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2. ನೀವು ತಪ್ಪನ್ನು ಒಪ್ಪುವಿರಾ? ಅಥವಾ ವಿಚಾರಣೆ ಆಗಬೇಕೆ?

ಉತ್ತರಃ

(ಮೇಲ್ಕಂಡ ಆರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು ಆರೋಪಿಯು ಕೊಟ್ಟ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆಯೆಂದು ಈ ಮೂಲಕ ದೃಢೀಕರಿಸಲಾಗಿದೆ.)

ದಿನಾಂಕಃ 06-08-2025.

ಸಹಿ/-
**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**
**ಚಿಂತಾಮಣಿ.**

ಆರೋಪಿಯ ಸಹಿಃ